**ದಿಃ 08-09-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**
**ಶ್ರೀ ಡಿ.ಆರ್.ಜೆ. 1,3 ಮತ್ತು 7 ನೇ ಪ್ರತಿವಾದಿಗಳ ಪರ ವಕೀಲರು ಪಾಟಿ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.**

**ಪಾಟಿ ಸವಾಲುಃ ಶ್ರೀ.ಹೆಚ್. ಎಂ.ವಿ 2 ನೇ ಪ್ರತಿವಾದಿ ಪರ ವಕೀಲರಿಂದಃ**

ಸಾಕ್ಷಿ ದಿಃ 01-11-2000 ರಂದು ಬರೆದ ವಿಭಾಗ ಪತ್ರವನ್ನು ತೋರಿಸಿ ಅದರ 5 ನೇ ಪುಟದಲ್ಲಿ ಕ್ರ.ಸಂ. 2 ಸಹಿ ತನ್ನ ಸಹಿ ನೋಡಿ ಗುರುತಿಸಿರುತ್ತಾರೆ. ಸದರಿ ವಿಭಾಗ ಪತ್ರದನ್ವಯ ವಾದಿ ಮತ್ತು ಪ್ರತಿವಾದಿಗಳು 2000 ದಲ್ಲಿ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಸದರಿ ವಿಭಾಗ ಪತ್ರವನ್ನು ವಾದಿ ಮತ್ತು ಪ್ರತಿವಾದಿಗಳು ಮತ್ತು ಅದರಲ್ಲಿ ಕಾಣಿಸಿದ ಸಮಕ್ಷಮ ಅದರಲ್ಲಿ ಬರೆದಿದ್ದಾರೆ ಎಂದರೆ ಸರಿಯಲ್ಲ. ಸದರಿ ವಿಭಾಗ ಪತ್ರಕ್ಕೆ ವಾದಿ ಮತ್ತು ಪ್ರತಿವಾದಿಗಳು ಒಂದು ತೀರ್ಮಾನಕ್ಕೆ ಬಂದು ನನ್ನ ಸಹಿ ಪಡೆದಿರುತ್ತಾರೆ. ನನ್ನ ಸಮಕ್ಷಮಕ್ಕೆ ವಿಭಾಗ ಪತ್ರಕ್ಕೆ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಿಭಾಗ ಪತ್ರಕ್ಕೆ ವಾದಿ ಮತ್ತು ಪ್ರತಿವಾದಿಗಳು ತಾವು ಪರಸ್ಪರ ಚೆನ್ನಾಗಿ ಇದ್ದೇವೆ ಎಂದು ಹೇಳಿ ನನ್ನ ಸಹಿ ಪಡೆದಿರುತ್ತಾರೆ. ಸದರಿ ವಿಭಾಗ ಪತ್ರದನ್ವಯ ಸ.ನಂ. 13/5 ರಲ್ಲಿ 35 ಗಂಟೆ, ಸ. ನಂ. 38/2 ಪಿ2 ಆಸ್ತಿಯಲ್ಲಿ 2 ಎಕರೆ 14 ಗುಂಟೆ ಜಮೀನು ಮತ್ತು ಪಾಳು ಜಾಗ 35*60 ಅಡಿ ಜಾಗ 1 ನೇ ವಾದಿಗೆ ಬಂದಿದೆ ಎಂದರೆ ಸಾಕ್ಷಿ ಹಾಗೆ ತಪ್ಪಾಗಿ ಬರೆಯಿಸಿದ್ದಾರೆ ಎಂದು ನುಡಿಯುತ್ತಾರೆ. ಯಾವ ಆಸ್ತಿ 1 ನೇ ವಾದಿಗೆ ಬಂದಿವೆ ಎಂದರೆ ಸಾಕ್ಷಿ ಯಾವುದೇ ವಿಭಾಗ ಆಗಿಲ್ಲ ಎಂದು ನುಡಿಯುತ್ತಾರೆ.

2 ನೇ ವಾದಿಗೆ ಸದರಿ ವಿಭಾಗ ಪತ್ರದನ್ವಯ ಸ.ನಂ. 13/8 ರಲ್ಲಿ 21 ಗುಂಟೆ ಜಮೀನು, ಸ.ನಂ. 137/3 ರಲ್ಲಿ 1 ಎಕರೆ 31 ಗುಂಟೆ ಜಮೀನು, ಸ.ನಂ. 55/ಪಿ1/ಪಿ1 ಆಸ್ತಿಯಲ್ಲಿ 2 ಎಕರೆ ಜಮೀನು ಬಂದಿದೆ ಎಂದರೆ ನನಗೆ ಗೊತ್ತಿಲ್ಲ. ಅಲ್ಲದೆ ಮೃತ ಯತೀಶಪ್ಪ ರವರಿಗೆ ಸ.ನಂ. 13/2 ರಲ್ಲಿ 1 ಎಕರೆ 33 ಗುಂಟೆ ಜಮೀನು, ಸ.ನಂ. 38/2 ಪಿ2 ಜಮೀನಿನಲ್ಲಿ 2 ಎಕರೆ 14 ಗುಂಟೆ ಜಮೀನು ಮತ್ತು ಪಾಲು ಜಾಗದಲ್ಲಿ 28 ಅಡಿ ಮತ್ತು 60 ಅಡಿ ಜಾಗ ಬಂದಿದೆ ಎಂದರೆ ಸಾಕ್ಷಿ ಸದರಿ ವಿಭಾಗ ಪತ್ರದ ಬ ಗ್ಗೆ ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ವಿನಂತಿ ಮೇರೆಗೆ ದಿನಾಂಕ 01-11-2000 ದ ವಿಭಾಗ ಪತ್ರವನ್ನು ನಿಡಿ 2 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿ ನಿಡಿ 2 ಎ ಎಂದು ಗುರುತಿಸಲಾಯಿತು.

**(ಸಮಯ 2 ಗಂಟೆ ಆದ್ದರಿಂದ ಮಧ್ಯಾಹ್ನ 3 ಗಂಟೆಗೆ ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಚನ್ನಗಿರಿ.

**ದಿಃ 08-09-2022 ರಂದು ಪುನಃ ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟಿ ಸವಾಲುಃಶ್ರೀ.ಹೆಚ್. ಎಂ.ವಿ 2 ನೇ ಪ್ರತಿವಾದಿ ಪರ ವಕೀಲರಿಂದಃ**

ನಿಡಿ 2 ರ ಪ್ರಕಾರ 4 ನೇ ಪ್ರತಿವಾದಿಗೆ ಸ.ನಂ. 13/2 ರಲ್ಲಿ 1 ಎಕರೆ 13 ಗುಂಟೆ ಜಮೀನು, ಸ.ನಂ. 85/ಪಿ2 ರಲ್ಲಿ 1 ಎಕರೆ 17 ½ ಗುಂಟೆ ಜಮೀನು, ಸ.ನಂ. 85/ಪಿ6 ಜಮೀನಿನಲ್ಲಿ 1 ಎಕರೆ 17 ½ ಗುಂಟೆ ಜಮೀನು ಮತ್ತು ಮನೆ ಮತ್ತು ಖಾಲಿ ಜಾಗ ಬಂದಿತ್ತು ಎಂದರೆ ನನಗೆ ಗೊತ್ತಿಲ್ಲ. ನಿಡಿ 2 ರಲ್ಲಿ ಹಂಚಿಕೆಯಾದ ಆಸ್ತಿಗಳಲ್ಲಿ ವಾದಿಗಳು, 2 ರಿಂದ 6 ನೇ ಪ್ರತಿವಾದಿಗಳು ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ಯತೀಶಪ್ಪ ರವರಿಗೆ ನಿಡಿ 2 ರಲ್ಲಿ ಹಂಚಿಕೆಯಾದ ಆಸ್ತಿಗಳನ್ನು ವಾದಿಗಳು ಮತ್ತು 4 ರಿಂದ 6 ನೇಪ್ರತಿವಾದಿಗಳು ಸ್ವಾಧೀನ ಹೊಂದಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳ ಸ.ನಂ. ಹೇಳಲು ಆಗುವುದಿಲ್ಲ. ಯಾವ ಯಾವ ದಾವಾ ಆಸ್ತಿಗಳಲ್ಲಿ ಯಾರು ಯಾರು ಸ್ವಾದೀನ ಹೊಂದಿದ್ದಾರೆ ಎಂದು ಹೇಳಲು ಆಗುವುದಿಲ್ಲ. 2 ನೇ ಪ್ರತಿವಾದಿ ಮಾತ್ರ ಪ್ರತ್ಯೇಕವಾಗಿ ವಾಸವಾಗಿದ್ದು ಉಳಿದವರೆಲ್ಲರೂ ಜಂಟಿಯಾಗಿ ವಾಸವಿದ್ದಾರೆ. ಹಾಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ 2 ರಂತೆ ವಿಭಾಗ ಆದಾಗಿನಿಂದ ಪ್ರತಿವಾದಿಗಳೆಲ್ಲರೂ

ಪ್ರತ್ಯೇಕವಾಗಿ ವಾಸವಿದ್ದಾರೆ ಎಂದರೆ ಸರಿಯಲ್ಲ. ನಿಡಿ 2 ರಂತೆ ನನ್ನ ಸಮಕ್ಷಮ ವಿಭಾಗವಾಗಿದ್ದರೂ ಸಹ ನಾನು ನಿಡಿ 2 ಕ್ಕೆ ವಿರುದ್ದವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ದಾವಾ ಆಸ್ತಿಗಳ ಯಜಮಾನಿಕೆ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ನಿಡಿ 2 ರಂತೆ ವಿಭಾಗ ಆಗಿದ್ದ ಕಾರಣ ಪ್ರಸ್ತುತ ವಿಭಾಗ ಮಾಡುವಂತಹ ಯಾವುದೇ ಆಸ್ತಿ ಉಳಿದಿಲ್ಲ ಎಂದರೆ ಸರಿಯಲ್ಲ. ವಾದಿಗಳು ಹೇಳಿ ಬರೆಯಿಸಿದ ನನ್ನ ಪ್ರಮಾಣ ಪತ್ರಕ್ಕೆ ಸಹಿ ಮಾಡಿ ಅನುಗುಣವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ 2 ರಲ್ಲಿ 2 ನೇ ಪ್ರತಿವಾದಿಗೆ ಯಾವುದೇ ಆಸ್ತಿ ಹಂಚಿಕೆಯಾಗಿಲ್ಲ ಎಂದರೆ ನನಗೆ ಗೊತ್ತಿಲ್ಲ. ಈಶ್ವರಪ್ಪ ರವರ ದತ್ತು ಪುತ್ರ 2 ನೇ ಪ್ರತಿವಾದಿಯಾಗಿದ್ದ ಕಾರಣ 2 ನೇ ಪ್ರತಿವಾದಿಗೆ ನಿಡಿ 2 ರಲ್ಲಿ ಯಾವುದೇ ಆಸ್ತಿ ಹಂಚಿಕೆಯಾಗಿಲ್ಲ ಎಂದರೆ ಸರಿಯಲ್ಲ.

**(ಶ್ರೀ ಎಸ್.ಬಿ.ಪಿ. 4 ರಿಂದ 6 ನೇ ಪ್ರತಿವಾದಿ ಪರ ವಕೀಲರು ಮೇಲಿನ ಪಾಟೀ ಸವಾಲನ್ನು ಅಳವಡಿಸಲು ಕೋರಿದ್ದು ಅನುಮತಿಸಲಾಯಿತು. )**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

**ಹಿರಿಯ ಸಿವಿಲ್ ನ್ಯಾಯಾಧೀಶರು**
ಮತ್ತು ಜೆ ಎಂ ಎಫ್ ಸಿ., ಚನ್ನಗಿರಿ.